ಓ.ಎಸ್ ನಂ. 62/2021

ಪಿ .ಡಬ್ಲ್ಯೂಃ 1

**ಸಾಕ್ಷಿಗೆ ಪ್ರಮಾಣ ವಚನವನ್ನು ದಿಃ 24-07-2024 ರಂದು ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಆರ್ ಆರ್ ಹೆಚ್ ನ್ಯಾಯವಾದಿರವರಿಂದಃ**

ನಮ್ಮ ತಂದೆ ಪರಮೇಶ್ವರ ಮಹಾಬಳೇಶ್ವರ ಹೆಗಡೆಯವರಿಗೆ 7 ಜನ ಗಂಡು ಮಕ್ಕಳು ಇರುತ್ತಾರೆ ಹಾಗೂ ಅವರುಗಳ ಹೆಸರು 1. ಮಹಾಬಳೇಶ್ವರ 2. ಸುಬ್ರಾಯ 3. ವೆಂಕಟ್ರಮಣ , 4. ದತ್ತಾತ್ರೇಯ 5.



ಶ್ರೀಧರ 6. ಗಣಪತಿ ಅಂದರೆ ನಾನು 7. ಲಕ್ಷ್ಮಿನಾರಾಯಣ . ಹಾಗೂ ಹೆಣ್ಣು ಮಕ್ಕಳು 5 ಜನರು ಇದ್ದು , ಅವರುಗಳ ಹೆಸರು 1. ಅನುಸೂಯಾ , 2. ಸರೋಜಾ 3. ವೇದಾವತಿ 4. ಸುಲೋಚನ 5. ಗೌರಿ .

7 ಜನ ಗಂಡು ಮಕ್ಕಳಲ್ಲಿ ಮಹಾಬಳೇಶ್ವರ , ಸುಬ್ರಾಯ , ವೆಂಕಟ್ರಮಣ , ದತ್ತಾತ್ರೇಯ ,ಶ್ರೀಧರ 6 ಅವರುಗಳು ಮೃತ ಪಟ್ಟಿರುತ್ತಾರೆ . ಎಲ್ಲಾ ಹೆಣ್ಣು ಮಕ್ಕಳುಗಳು ಇನ್ನು ಜೀವಂತವಾಗಿದ್ದಾರೆ . ಹೆಣ್ಣು ಮಕ್ಕಳ ಪೈಕಿ ಗೌರಿ ಎನ್ನುವವರನ್ನು ಹೊರತುಪಡಿಸಿ ಬೇರೆ ಯಾವ ಹೆಣ್ಣು ಮಕ್ಕಳನ್ನು ಈ ದಾವೆಗೆ ಸೇರಿಸಿರುವುದಿಲ್ಲ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ .

ಮಹಾಬಳೇಶ್ವರ ಅವರಿಗೆ 2 ಜನ ಗಂಡು ಮಕ್ಕಳು , 3 ಜನ ಹೆಣ್ಣು ಮಕ್ಕಳು ಇದ್ದು , ಅದರಲ್ಲಿ 2 ಜನ ಹೆಣ್ಣು ಮಕ್ಕಳು ಮೃತ ಪಟ್ಟಿರುತ್ತಾರೆ . ಅದರಲ್ಲಿ ಪ್ರತಿವಾದಿಯು ಮಹಾಬಳೇಶ್ವರನ ಒಬ್ಬ ಮಗನಾಗಿರುತ್ತಾನೆ ಹಾಗೂ ಮತ್ತೊಬ್ಬ ಮಗನ ಹೆಸರು ನಾರಾಯಣ ಆಗಿರುತ್ತದೆ . ನಾರಾಯಣ ಹಾಗೂ ಇನ್ನು ಇಬ್ಬರು ಜನ ಹೆಣ್ಣು ಮಕ್ಕಳು ವಾರಸುದಾರರು ಹಾಗೂ ಇನ್ನೊಬ್ಬ ಮಗಳನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದರೆ ಸರಿ .

ಮೃತ ಸುಬ್ರಾಯ ಹೆಗಡೆಯವರ ವಾರಸುದಾರರನ್ನು ಈ ದಾವೆಯಲ್ಲಿ ವಾದಿಯಾಗಿರುತ್ತಾರೆ .

ಮೃತ ವೆಂಕಟ್ರಮಣ ಪರಮೇಶ್ವರ ಹೆಗಡೆಯವರಿಗೆ ವಾರಸುದಾರರು ಇರುತ್ತಾರೆ ಹಾಗೂ ಅವರನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ .

ಮೃತ ದತ್ತಾತ್ರೇಯ ಪರಮೇಶ್ವರ ಹೆಗಡೆಯವರಿಗೆ ವಾರಸುದಾರರು ಇರುತ್ತಾರೆ ಹಾಗೂ ಅವರನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ .

ಮೃತ ಶ್ರೀಧರ ಪರಮೇಶ್ವರ ಹೆಗಡೆಯವರಿಗೆ ವಾರಸುದಾರರು ಇರುತ್ತಾರೆ ಹಾಗೂ ಅವರನ್ನು ಈ ದಾವೆಯಲ್ಲಿ ಸೇರಿಸಿರುತ್ತೇನೆ .

ನಮ್ಮ ಮೂಲ ಕುಟುಂಬದಲ್ಲಿ ದಿಃ 26-10-1978 ರಂದು ಒಂದು ಬಾರಿ ಹಿಸ್ಸೆಯಾಗಿರುತ್ತದೆ . ಸದ್ರಿ ಹಿಸ್ಸೆಯಲ್ಲಿ ಎಲ್ಲಾ ಆಸ್ತಿಗಳನ್ನು ಸೇರಿಸಿರುವುದಿಲ್ಲ . ಅದರಲ್ಲಿ ಸರ್ವೆ ನಂಬರ್ 161 , 56/8 , 56/4 ಸೇರಿಸಿರುವುದಿಲ್ಲ . ಸದ್ರಿ ಹಿಸ್ಸೆಯನ್ನು ತೊಂಡಿ ಕರಾರು ಪ್ರಕಾರ ಬರೆಯಲಾಗಿತ್ತು . ಸದ್ರಿ ಹಿಸ್ಸೆಯ ಪ್ರಕಾರ ನಮಗೆ ಬಂದ ಜಮೀನುಗಳ ಮೇಲೆ ನಾವು ಪ್ರತ್ಯೇಕವಾಗಿ ಕಬಜಾ ವಹಿವಾಟ ಮಾಡಿಕೊಂಡು ಬಂದಿರುತ್ತೇವೆ .



ಸದ್ರಿ ಹಿಸ್ಸೆಯ ಕಾಲದಲ್ಲಿ ಪ್ರತಿವಾದಿಯ ತಂದೆ ಮಹಾಬಳೇಶ್ವರ ಪರಮೇಶ್ವರ ಹೆಗಡೆಯವರು ಜೀವಂತ ಇದ್ದರು ಹಾಗೂ ಅವರಿಗೆ ಹಿಸ್ಸೆಯಲ್ಲಿ ಸರ್ವೆ ನಂಬರ್ 55 ರಲ್ಲಿ 9 ಗುಂಟೆ ಭಾಗಾಯತ್ ಜಮೀನು ಬಂದಿತ್ತು . ಸರ್ವೆ ನಂಬರ್ 161 ಸದ್ರಿ ಹಿಸ್ಸೆಯಲ್ಲಿ ಮಹಾಬಳೇಶ್ವರ ಪರಮೇಶ್ವರ ಹೆಗಡೆಯವರ ಹಿಸ್ಸೆಗೆ ಬಂದಿತ್ತು ಎಂದರೆ ಸರಿಯಲ್ಲ. ನಮ್ಮ ಕುಟುಂಬದ ಹಿಸ್ಸೆಯ ನಂತರ ಸರ್ವೆ ನಂಬರ್ 161 ಕ್ಕೆ ಸಂಬಂಧಿಸಿದಂತೆ ಕಂದಾಯ ದಾಖಲಾತಿಗಳಲ್ಲಿ ಮಹಾಬಳೇಶ್ವರ ಪರಮೇಶ್ವರ ಹೆಗಡೆಯವರ ಹೆಸರು ಮಾತ್ರ ಇತ್ತು ಎಂದರೆ ಸಾಕ್ಷಿಯು ನಮ್ಮ ಎಲ್ಲರ ಹೆಸರುಗಳು ಇತ್ತು ಎಂದು ನುಡಿಯುತ್ತಾರೆ . ಸದ್ರಿ ಸರ್ವೆ ನಂಬರ್ ಹಿಸ್ಸೆಯ ನಂತರವು ಕೂಡಾ ನಮ್ಮ ಎಲ್ಲರ ಸಾಮೂಹಿಕ ಹಕ್ಕಿಗೆ ವಹಿವಾಟಿಯಲ್ಲಿತ್ತು ಎಂದು ತೋರಿಸಲು ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ ಸರ್ವೆ ನಂಬರ್ 161 ರ ಪಹಣಿ ಹಾಗೂ ಮ್ಯುಟೇಶನ್ ಪ್ರತಿಯಲ್ಲಿ ಮಹಾಬಳೇಶ್ವರ ಪರಮೇಶ್ವರ ಹೆಗಡೆಯವರ ಹೆಸರು ನಮೂದು ಆಗಿರುತ್ತದೆ ಹಾಗೂ ಅವರ ಮರಣದ ನಂತರ ಅವರ ವಾರಸುದಾರರ ಹೆಸರು ನಮೂದು ಆಗಿರುತ್ತದೆ ಎಂದರೆ ಸರಿ .

ಸಾಕ್ಷಿಗೆ ಕಲಗದ್ದೆ ಗ್ರಾಮ , ಉಂಬಳಮನೆ ಹೋಬಳಿ , ಸಿದ್ದಾಪುರ ತಾಲ್ಲೂಕಿನ ಮ್ಯುಟೇಶನ್ ಎಂಟ್ರಿ ನಂಬರ್ 1141 ರ ದೃಢಿಕೃತ ಪ್ರತಿಯನ್ನು ತೋರಿಸಲಾಗಿ ಸಾಕ್ಷಿಯು ಅದನ್ನು ಗುರುತಿಸಿದ್ದರಿಂದ ಅದನ್ನು ನಿಡಿ-1 ಎಂದು ಗುರುತಿಸಲಾಯಿತು . ನಾನು ಅಥವಾ ಇನ್ನುಳಿದ ವಾದಿಯವರು ನಿಡಿ-1 ಎಂಟ್ರಿಯ ಬಗ್ಗೆ ಕಂದಾಯ ಇಲಾಖೆಯಲ್ಲಿ ಮೇಲ್ಮನವಿಯನ್ನು ಸಲ್ಲಿಸಿರುವುದಿಲ್ಲ . ಸರ್ವೆ ನಂಬರ್ 161 ರಲ್ಲಿ ನನಗಾಗಲೀ , ಅಥವಾ ಇನ್ನುಳಿದ ವಾದಿಯರಿಗಾಗಲೀ , ಹಿಸ್ಸೆಯನ್ನು ಕೇಳುವ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ .

ನಮ್ಮ ಮೂಲ ಕುಟುಂಬದಲ್ಲಿ ದಿಃ 26-10-1978 ರಂದು ಆದ ಹಿಸ್ಸೆಯಲ್ಲಿ ಕುಟುಬಂದ ಎಲ್ಲಾ ಆಸ್ತಿಗಳನ್ನು ಸೇರಿಸಿ ಮಾಡಲಾಗಿದೆ ಎಂದರೆ ಸರಿಯಲ್ಲ . ದಿಃ 08-02-1979 ರಂದು ನಮ್ಮ ಕುಟುಂಬದ ವಿಭಾಗದ ಆಧಾರದ ಮೇಲೆ ಪಹಣಿ ದಾಖಲೆ ಬದಲಾವಣೆ ಆಗಿದೆ ಎಂದರೆ ಸರಿ .

ಪ್ರತಿವಾದಿಯವರ ತಂದೆ ಮಹಾಬಳೇಶ್ವರ ಪರಮೇಶ್ವರ ಹೆಗಡೆಯವರು ದಿಃ 16-10-1996 ರಲ್ಲಿ ಮೃತ ಪಟ್ಟಿರುತ್ತಾರೆ ಎಂದರೆ ಸರಿ . ಅವರು ಮೃತ ಪಟ್ಟ ನಂತರ ಅವರಿಗೆ ಬಂದಂತಹ ಜಮೀನುಗಳು ಪ್ರತಿವಾದಿ ಹಾಗೂ ಅವರ ವಾರಸುದಾರರ ಹೆಸರಿಗೆ ಬದಲಾವಣೆ ಆಗಿರುತ್ತದೆ ಎಂದರೆ ಸರಿ .

ಪ್ರತಿವಾದಿ ಹಾಗೂ ಅವರ ಸಹೋದರರು ಒಟ್ಟಿಗೆ ವಾಸವಾಗಿರುತ್ತಾರೆ . ದಾವಾ ಆಸ್ತಿಯ ಮೇಲೆ ಮೃತ ವೆಂಕಟ್ರಮಣ ಪರಮೇಶ್ವರ ಹೆಗಡೆಯವರಿಗೆ ಯಾವುದೇ ಹಕ್ಕು ಇರುವುದಿಲ್ಲ . ವೆಂಕಟ್ರಮಣ ಪರಮೇಶ್ವರ ಹೆಗಡೆಯವರಿಗೆ ವಿಭಾಗವನ್ನು ನಮ್ಮ ತಂದೆಯವರು ಜೀವಂತ ಇರುವ ಕಾಲಕ್ಕೆ ಮಾಡಿಕೊಡಲಾಗಿದೆ ಹಾಗು



ಅದರ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ . ಸದ್ರಿ ದಾಖಲೆಯಲ್ಲಿ ವೆಂಕಟ್ರಮಣ ಪರಮೇಶ್ವರ ಹೆಗಡೆಯವರಿಗೆ ಕುಟುಂಬದ ಆಸ್ತಿಯ ಮೇಲೆ ಇನ್ನು ಮುಂದೆ ಯಾವುದೇ ಹಕ್ಕು ಇರುವುದಿಲ್ಲ ಎಂದು ನಮೂದು ಆಗಿರುತ್ತದೆ . ಈ ದಾವೆಯಲ್ಲಿ ನಾನು ಸೇರಿಸದೇ ಇರುವ ಇನ್ನುಳಿದ ನಮ್ಮ ಸಹೋದರಿಯರು ದಾವಾ ಆಸ್ತಿಯ ಸಲುವಾಗಿ ಯಾವುದೇ ಹಕ್ಕು ಬಿಡುಗಡೆ ಪತ್ರವನ್ನು ನಮಗೆ ಬರೆದುಕೊಟ್ಟಿರುವುದಿಲ್ಲ .

ನನ್ನ ಹಿಸ್ಸೆಗೆ ಬಂದ ಸರ್ವೆ ನಂಬರ್ 55/1 ನ್ನು ನಾನು ಮಾರಾಟ ಮಾಡಿರುತ್ತೇನೆ .ಮೃತ ಸುಬ್ರಾಯ , ದತ್ತಾತ್ರೇಯ, ಶ್ರೀಧರ ಇವರ ಹಕ್ಕಿಗೆ ಕೊಟ್ಟ ಕಲಗದ್ದೆ ಗ್ರಾಮ ಸರ್ವೆ ನಂಬರ್ 64/1 ನ್ನು ಅವರ ಕವಲಿನವರೇ ವಹಿವಾಟ ಮಾಡಿಕೊಂಡು ಬರುತ್ತಿದ್ದಾರೆ . ನಮ್ಮ ಕುಟುಂಬದ ಎಲ್ಲಾ ಆಸ್ತಿಗಳು ವಿಭಾಗವಾಗಿರುವುದರಿಂದ ಈ ದಾವಾ ಆಸ್ತಿಯ ಮೇಲೆ ಹಿಸ್ಸೆಯನ್ನು ಕೇಳಲು ನನಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ .

**ಮರು ವಿಚಾರಣೆ ಇಲ್ಲ .**

**(ನನ್ನ ಹೇಳಿಕೆ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

**ಓ.ಹೇ.ಕೇ. ಸರಿ ಇದೆ,**

**ಸಿವಿಲ್ ನ್ಯಾಯಾಧೀಶರು ಸಿದ್ದಾಪುರ**